ಬೆಂಗಳೂರು ನಗರ ವಿಶ್ವವಿದ್ಯಾನಿಲಯ

BENGALURU CITY UNIVERSITY

Office of the Registrar(Evaluation), Central College Campus, Dr. B.R AmbedkarVeedhi, Bengaluru – 560 001. E-mail: registrarbcu@gmail.com, Ph.No.080-22295559

BCU/EX/Quo/Hiringvehel/UG, PG & B.Ed/Exams/2023-24/222 Date:19.12.2023

## ಕೊಟೇಷನ್

**ವಿಷಯ: ದಿನದ ಬಾಡಿಗೆ ಆಧಾರದ ಮೇಲೆ ಕಾರುಗಳನ್ನು ಸರಬರಾಜು ಮಾಡಲು ಕೊಟೇಷನ್**

ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ನಡೆಯುವ ಸ್ನಾತಕ, ಸ್ನಾತಕೋತ್ತರ ಮತ್ತು ಬಿ.ಎಡ್ ಪರೀಕ್ಷೆಗಳಿಗೆ, ಪರೀಕ್ಷೆಗಳು ನಡೆಯುವ ದಿನಗಳಂದು ಪರೀಕ್ಷಾ ಕೇಂದ್ರಗಳಿಗೆ ಜಾಗೃತ ದಳದ ತಂಡ ಭೇಟಿ ನೀಡಬೇಕಾಗಿರುವುದರಿಂದ, ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಸುಮಾರು 03 ಟೊಯೋಟಾ ಎಟಿಯಸ್/ಮಾರುತಿ ಡಿಸೈರ್ ಕಾರುಗಳು ಬೇಕಾಗಿರುತ್ತವೆ.

ಮೇಲೆ ಹೇಳಿದ ಮಾದರಿ ಕಾರುಗಳನ್ನು ಬಾಡಿಗೆ ಆಧಾರದ ಮೇಲೆ ಸರಬರಾಜು ಮಾಡಲು ಏಜೆನ್ಸಿ ಹಾಗೂ ಕಂಪನಿಗಳಿಂದ ದರಪಟ್ಟಿಯನ್ನು (ಕೋಟೇಷನ್‌ನ್ನು) ಕರೆಯಲಾಗಿದೆ. ಆಸಕ್ತಿಯುಳ್ಳ ಕಾರುಗಳ ಮಾಲೀಕರು/ ಸರಬರಾಜುದಾರರು/ ಸಂಸ್ಥೆಗಳು ತಮ್ಮ ದರಪಟ್ಟಿಯನ್ನು ಮತ್ತು ನಿಬಂಧನೆಗಳನ್ನು ದಿನಾಂಕ 29.12.2023ರಂದು ಸಂಜೆ 4.00 ಘಂಟೆಯ ಒಳಗೆ ಸಲ್ಲಿಸತಕ್ಕದ್ದು. ಕೋಟೇಷನ್‌ಗಳನ್ನು ಮುಚ್ಚಿದ ಲಕೋಟೆಯಲ್ಲಿ ಹಾಗೂ ಲಕೋಟೆ ಮೇಲೆ ಟೊಯೋಟಾ ಎಟಿಯಸ್/ಮಾರುತಿ ಡಿಸೈರ್ ಕಾರುಗಳ ಸರಬರಾಜಿಗೆ "ದರಪಟ್ಟಿ (ಕೋಟೇಷನ್)" ಎಂದು ನಮೂದಿಸತಕ್ಕದ್ದು. ನಿಗದಿತ ದಿನಾಂಕದ ನಂತರ ಬಂದ ಕೋಟೇಷನ್ನುಗಳನ್ನು ಪರಿಗಣಿಸಲಾಗುವುದಿಲ್ಲ. ನಿಗಧಿತ ಸಮಯದಲ್ಲಿ ಸ್ವೀಕರಿಸಿರುವ ಕೊಟೇಷನ್ನುಗಳನ್ನು ದಿನಾಂಕ 30.12.2023 ರಂದು ಬೆಳಗ್ಗೆ 11.00 ಘಂಟೆಗೆ ತೆರೆಯಲಾಗುವುದು. ಈ ಸಂದರ್ಭದಲ್ಲಿ ಇಚ್ಛೆಯುಳ್ಳ ಕೊಟೇಷನ್ ಸಲ್ಲಿಸಿರುವವರು ಹಾಜರಿರಬಹುದು.

ಕೋಟೇಷನ್ ಅನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಕುಲಸಚಿವರು(ಮೌಲ್ಯಮಾಪನ)ರವರು ಹೊಂದಿರುತ್ತಾರೆ.

ಕುಲಸಚಿವರು(ಮೌಲ್ಯಮಾಪನ)
**ಕುಲಸಚಿವರು (ಮೌಲ್ಯಮಾಪನ)**
**ಬೆಂಗಳೂರು ನಗರ ವಿಶ್ವವಿದ್ಯಾನಿಲಯ**
**ಸೆಂಟ್ರಲ್ ಕಾಲೇಜು ಕ್ಯಾಂಪಸ್**
**ಬೆಂಗಳೂರು – 560 001**

ಗೆ,

1. ಸೂಚನಾ ಫಲಕ
2. ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು ವೆಬ್‌ಸೈಟ್ ನಿರ್ವಾಹಕರು – ಇದನ್ನು ವಿಶ್ವವಿದ್ಯಾಲಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಲಾಗಿದೆ.